<u>ಪಿ.ಡಬ್ಲೂ.–2/ ಪಿ.ಡಬ್ಲೂ–2</u>

**ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ.**

## ಸಿ.ಸಿ.ನಂ.687/2025

| | | |
|---|---|---|
| ಸಾಕ್ಷಿದಾರರ ಹೆಸರು | : | ಕುಮಾರಸ್ವಾಮಿ |
| ತಂದೆಯ  ಹೆಸರು | : | ಪುಟ್ಟಸ್ವಾಮಪ್ಪ |
| ವಯಸ್ಸು | : | 72 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಆಲನಹಳ್ಳಿ, ಹೆಚ್ ಡಿ ಕೋಟೆ |

**<u>ಸಾಕ್ಷಿಯನ್ನು ದಿನಾಂಕ: 04.08.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದ:</u>**

ಚಾಸಾ–1 ರವರ ಪರಿಚಯ ಇರುತ್ತದೆ. ಅವರು ನಮ್ಮ ಊರಿನವರು. ಚಾಸಾ 3 ಹಾಗೂ 6 ಪರಿಚಯ ಇರುತ್ತದೆ. ಅವರು ನಮ್ಮ ಗ್ರಾಮದವರು.  ಚಾಸಾ 7 ರವರ ಪರಿಚಯ ಇರುತ್ತದೆ. ಅವರು ಸರಗೂರು ಗ್ರಾಮದವರು. ಚಾಸಾ 4 ರವರು ಚಾಸಾ 1 ರವರ ಹೆಂಡತಿ. ಚಾಸಾ 5 ರವರು ಚಾಸಾ 1 ರವರ ತಾಯಿ.

ದಿನಾಂಕ 26.11.2024 ರಂದು ಸಂಜೆ ಸುಮಾರು 4.00 ಗಂಟೆ ಹೊತ್ತಿಗೆ ನಾನು ಜಮೀನಿನ ಕಡೆ ಹೋಗುತ್ತಿರುವಾಗ ಹೆಚ್ ಡಿ ಕೋಟೆಯ ಚೈತನ್ಯ ಶಾಲೆಯ ಮುಂಭಾಗ ಇರುವ ಚಾಸಾ 1 ರವರ ಟಿವಿ ಅಂಗಡಿಯ ಬಳಿ ಚಾಸಾ 1 ರವರು ಅಳುತ್ತಾ ಬಿದ್ದಿರುವುದು ಕಂಡುಬಂದಿದ್ದು ಅಲ್ಲಿ ಆ ಸಮಯದಲ್ಲಿ ಚಾಸಾ 3 ಹಾಗೂ 5 ರವರು ಇದ್ದಿರುತ್ತಾರೆ. ಆಗ ನಾನು ಚಾಸಾ 1 ರವರನ್ನು ಈ ಬಗ್ಗೆ ವಿಚಾರಿಸಿದಾಗ ಅವರು ಆರೋಪಿಯು ಹಣದ ವಿಚಾರದಲ್ಲಿ ಗಲಾಟೆ ಮಾಡಿ ಹಲ್ಲೆ ಮಾಡಿರುವುದಾಗಿ ತಿಳಿಸಿರುತ್ತಾರೆ. ನಂತರ ಅಲ್ಲಿಗೆ ಅಂಬುಲೆನ್ಸ್ ಬಂದಿದ್ದು ಚಾಸಾ 1 ರವರ ತಾಯಿಯಾದ ಚಾಸಾ 5 ರವರು ನನ್ನಲ್ಲಿ ಚಾಸಾ 1 ರವರನ್ನು ಅಂಬುಲೆನ್ಸ್ ಆಸ್ಪತ್ರೆಗೆ ಕರೆದುಕೊಂಡು ಹೋಗಲು ಬರುವಂತೆ ತಿಳಿಸಿದ್ದು ಆ ಪ್ರಕಾರ ನಾನು, ಚಾಸಾ 1 ಹಾಗೂ 5 ರವರ ಅಂಬುಲೆನ್ಸ್ ನಲ್ಲಿ ಮೇಟಗಳ್ಳಿ ಸರ್ಕಾರಿ ಆಸ್ಪತ್ರೆಗೆ ಹೋಗಿರುತ್ತೇವೆ. ನಂತರ ದಿನಾಂಕ 30.11.2024 ರಂದು ಪೋಲಿಸರು ಕೃತ್ಯ ಸ್ಥಳದಲ್ಲಿ ಇದ್ದಿದ್ದು ನಾನು ಆಕಡೆ ನಡೆದುಕೊಂಡು ಹೋಗುತ್ತಿರುವಾಗ ಪೋಲಿಸರು ನನ್ನಲ್ಲಿ

ಘಟನೆಯ ಸಂಬಂಧ ಮಹಜರ್ ಕ್ರಮ ಜರುಗಿಸುತ್ತಿರುವುದಾಗಿ ತಿಳಿಸಿ ಅದಕ್ಕೆ ಸಹಿ ಮಾಡುವಂತೆ ತಿಳಿಸಿರುತ್ತಾರೆ. ಆ ಪ್ರಕಾರ ನಾನು ಮಹಜರ್ ಗೆ ಸಹಿ ಮಾಡಿರುತ್ತೇನೆ. ಆ ಸಮಯದಲ್ಲಿ ಚಾಸಾ 3 ಹಾಗೂ 6 ರವರು ಇದ್ದಿರುತ್ತಾರೆ. ಸದರಿ ಮಹಜರ್ ಅನ್ನು ಬೆಳಗ್ಗೆ 11.00 –11.30 ಗಂಟೆಯಿಂದ 12.00 ಗಂಟೆಯವರೆಗೆ ಜರುಗಿಸಿರುತ್ತಾರೆ. ಸಾಕ್ಷಿಗೆ ಒಂದು ದಾಖಲೆಯನ್ನು ತೋರಿಸಲಾಗಿ ಸಾಕ್ಷಿ ಅದು ಮೇಲೆ ಹೇಳಿದಂತೆ ಪೋಲಿಸರು ಜರುಗಿಸಿದ ಮಹಜರ್ ಎಂದು ನೋಡಿ ಗುರುತಿಸುತ್ತಾರೆ. ಸಾಕ್ಷಿ ಗುರುತಿಸಿದ ಮೇರೆಗೆ ಸದರಿ ಮಹಜರ್ ಅನ್ನು **ನಿಪಿ–2** ಎಂದು ಸಾಕ್ಷಿಯ ಸಹಿಯನ್ನು **ನಿಪಿ–2(ಎ)** ಎಂದು ಗುರುತಿಸಲಾಯಿತು. ನಂತರ ಪೋಲಿಸರು ಈ ಬಗ್ಗೆ ನನ್ನನ್ನು ವಿಚಾರಣೆ ಮಾಡಿರುತ್ತಾರೆ.

**ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಯು ಎಸ್ ಜೆ/ ಡಿ ಎಸ್ ರವರಿಂದಃ**

ಚಾಸಾ 3 ರವರು ಚಾಸಾ 1 ರವರಿಗೆ ಯಾವುದೇ ಸಂಬಂಧಿಯಲ್ಲ, ಒಂದೇ ಗ್ರಾಮದವರಾಗಿರುತ್ತಾರೆ. ನಾನು ಸಹ ಚಾಸಾ 1 ರವರಿಗೆ ಯಾವುದೇ ಸಂಬಂಧಿಯಲ್ಲ, ಬದಲಾಗಿ ಒಂದೇ ಗ್ರಾಮದವರಾಗಿರುತ್ತೇವೆ. ನಾನು ಹಾಗೂ ಚಾಸಾ 1 ರವರು ಒಂದೇ ಜನಾಂಗ ಎಂದರೆ ಸರಿ. ಸದರಿ ಕೃತ್ಯ ಸ್ಥಳದಿಂದ ಬಸ್ ನಿಲ್ದಾಣಕ್ಕೆ ಸುಮಾರು 200 ರಿಂದ 250 ಮೀ ಅಂತರ ಇರುತ್ತದೆ. ಗಲಾಟೆಯಾದರೆ ಅಲ್ಲಿ ಸುಮಾರು ಜನ ಗುಂಪು ಸೇರುತ್ತಾರೆ ಎಂದರೆ ಸರಿ. ನಾನು ಸ್ಥಳಕ್ಕೆ ಹೋದ ಸಮಯದಲ್ಲಿ ಚಾಸಾ 1, 3, 5, 6 ಹಾಗೂ ಇನ್ನೊಬ್ಬರು ಬಸವಣ್ಣ ಎನ್ನುವವರು ಸ್ಥಳದಲ್ಲಿ ಇದ್ದರು. ಚಾಸಾ 1 ರವರಿಗೆ ಹಿಂದೆ ಒಮ್ಮೆ ಬೈಕ್ ಅಪಘಾತವಾಗಿದ್ದು ಅದರಲ್ಲಿ ಗಾಯವಾಗಿತ್ತು ಎಂದರೆ ಆ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನನ್ನಲ್ಲಿ ಚಾಸಾ 5 ರವರು ಆಸ್ಪತ್ರೆಗೆ ಬರುವಂತೆ ಕರೆದಿಲ್ಲ ಹಾಗೂ ಆಸ್ಪತ್ರೆಗೆ ನಾನು ಹೋಗಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಆಸ್ಪತ್ರೆಗೆ ಕರೆದುಕೊಂಡ ಮೇಲೆ ರಾತ್ರಿಯಾಗಿದ್ದು ನಾನು ಮರುದಿನ ಬೆಳಗ್ಗೆ ಬಂದಿರುತ್ತೇನೆ. ಮಹಜರ್ ಗೆ ಬರುವಂತೆ ಪೋಲಿಸರು ನನಗೆ ಯಾವುದೇ ನೋಟಿಸ್ ನೀಡಿರುವುದಿಲ್ಲ. ಸದರಿ ಮಹಜರ್ ಅನ್ನು ಯಾರು ಹೇಳಿ ಯಾರು ಬರೆಸಿದರು ಎಂದು ನನಗೆ ಗೊತ್ತಿರುವುದಿಲ್ಲ. ಪೋಲಿಸರು ನಾನು ಹೋಗುವ ಸಮಯದಲ್ಲಿ ಮಹಜರ್ ಬರೆದಿದ್ದು ನಂತರ ಓದಿ ತಿಳಿಸಿರುತ್ತಾರೆ. ನಾನು ಹೋಗುವ ಮೊದಲೇ ನಿಪಿ–2 ರ ಮಹಜರ್ ಅನ್ನು ಕೇಸಿಗೆ ಅನುಕೂಲವಾಗುವ ರೀತಿಯಲ್ಲಿ ಪೋಲಿಸರು ಬರೆದಿದ್ದು ಅದಕ್ಕೆ ನಾನು ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವಂತೆ ಈ ಪ್ರಕರಣದ ಬಗ್ಗೆ ಯಾವುದೇ ವಿಚಾರ ಗೊತ್ತಿಲ್ಲದೇ ಇದ್ದು ಚಾಸಾ 1 ರವರು ನನ್ನ ಜನಾನಗದವರಾದ್ದರಿಂದ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಪೋಲಿಸರು ನನಗೆ ತಿಳಿಸಿದ ಮೇರೆಗೆ ನಾನು ಈ ದಿನ ಚಾಸಾ 1 ರವರ ಜೊತೆ ಬೈಕ್ ನಲ್ಲಿ ನ್ಯಾಯಾಲಯಕ್ಕೆ ಬಂದಿರುತ್ತೇನೆ. ನಿಪಿ–2 ರ ಮಹಜರ್ ಗೆ ನಾನು ಯಾವುದೇ ಕೃತ್ಯ ನಡೆಯಲಾಯಿತು ಎಂದು ಹೇಳಿದ ಸ್ಥಳದಲ್ಲಿ ಸಹಿ ಮಾಡಿರುವುದಿಲ್ಲ ಬದಲಾಗಿ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಮುಖ್ಯ

ವಿಚಾರಣೆಯಲ್ಲಿ ತಿಳಿಸಿರುವಂತೆ ಆರೋಪಿ ಯಾವುದೆ ಕೃತ್ಯವನ್ನು ಎಸಗಿರುವುದಿಲ್ಲ ಬದಲಾಗಿ ಚಾಸಾ 1 ರವರು ನಡೆದುಕೊಂಡು ಹೋಗುವಾಗ ಬಿದ್ದು ಮಾಡಿಕೊಂಡ ಗಾಯವನ್ನು ಬಳಸಿಕೊಂಡು ಸುಳ್ಳು ದೂರನ್ನು ನೀಡಿದ್ದು ಅದಕ್ಕೆ ಪೂರಕವಾಗಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ**: ಇರುವುದಿಲ್ಲ.

(**ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.**)

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**